ಕಥೆ

# ಮಾಯೆಯೆಂಬುದು ಮಾಯೆಯಲ್ಲ



**ರಾಜಶೇಖರ ಹಳೆಮನೆ**

ಕಲೆ: ಎಸ್.ವಿ. ಹೂಗಾರ್

ಕನ್ನಡಿಯನ್ನು ಹತ್ತು ಸಾರಿ ತಿರುಗಿ ತಿರುಗಿ ನೋಡಿಕೊಂಡು ಸರಿಯಾಗಿದೆ ಅನಿಸಿ ಹೊರಗೆ ಹೊರಡಬೇಕನ್ನುವುದರಲ್ಲಿ ಮತ್ತೊಮ್ಮೆ ಮುಖ ನೋಡಿಕೊಳ್ಳಬೇಕನಿಸಿತು. ಕಪ್ಪು ಮುಖದಲ್ಲಿ ಬಿಳಿ ಹಲ್ಲುಗಳು ಹೊಳೆಯುತ್ತಿದ್ದವು. ಗರಿ ಗರಿಯಾದ ಬಿಳಿ ಸುಣ್ಣದಂಥ ಅಂಗಿ ಪ್ಯಾಂಟು ಕಣ್ಣು ಕುಕ್ಕುತ್ತಿತ್ತು. ಬೆರಳಲ್ಲಿದ್ದ ಸಾಯಿಬಾಬ, ಹುಲಿಗೆಮ್ಮನ ಚಿತ್ರವಿರುವ ಉಂಗುರಗಳನ್ನು ನೋಡಿಕೊಂಡ. ಅವು ತನ್ನ ಬೆರಳಿಗಿಂತ ದೊಡ್ಡವಿವೆ ಅನಿಸಿತು. ಎರಡು ಉಂಗುರಗಳು ನಂಬರ್ ಒನ್ ಕಂಟ್ರಾಕ್ಟರ್ ಸಿದ್ದಪ್ಪಗೌಡ ಎಂಟು ದಿನಗಳ ಹಿಂದೆ ಕಾಣಿಕೆ ನೀಡಿದ್ದರು. ಅವು ಬೆರಳಿಗೆ ತುಸು ಭಾರವೆ ಅನಿಸಿದವು. ಹೊರಗೆ ನಿಂತಿದ್ದ ಸುಂದರನನ್ನು ಕರೆದು 'ಉಂಗುರ ಎಂಗ ಕಾಣತಾವಲೆ' ಎಂದು ಕೇಳಿದ. 'ಸಾಹುಕಾರ ನಿಮ್ಮ ಮುಖಕ್ಕ ಬಾಳ ಚಂದ ಒಪ್ಪುತಾವಪ' ಎಂದು ಹಲ್ಲು ಕಿರಿದು ನಿಂತ. 'ಲೇ... ಉಂಗುರ ಕೈಗೆ ಹಾಕ್ಕಂತಾರಲೇ... ಮುಖಕ್ಕಲ್ಲ. ನಿನ್ನಂತವನ ನನ ಪಿಎ ಮಾಡಿಕಂಡಿನಲ್ಲಾ... ಹೋಗು ಹೋಗು ಯಾರನ್ನ ಗೇಟು ದಾಟಿ ಬಿಡುಬ್ಯಾಡ.'

'ಅಲ್ಲಿ ರುದ್ರೇಶ ನಿಂತಾನಪ. ಎಲ್ಲಾರ ಸಮಸ್ಯೆ ಬರಕಳ್ಳಕತ್ತಾನ.'

'ಸರಿ ಸರಿ ಕೂದಲರ ಹೆಂಗ ಕಾಣತಾವ ಹೇಳು'

'ತಮ್ಮ ಮುಖಕ್ಕಿಂತಲೂ ಕಪ್ಪಾವವಪೋ'

'ಹೌದಲೇ. ಗೌಡರು ನಾವು ಕಟಿಂಗ್‌ಗೆ ಕೂಡೆ ಹೋಗಿದ್ದಿವಿ. ಒಂದು ಸಾರಿ ಬಣ್ಣ ಹಚ್ಚಿದ್ದರು. ಗೌಡರು ನೋಡಿ 'ಲೇ ಕೂದಲಕ್ಕಿಂತ ನಿನ ಮುಖನೆ ಕಪ್ಪು

